ಅ) ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಜಿಎನ್ 2/2002-03 ದಿನಾಂಕ : 19-06-2002ರಲ್ಲಿ ತಿದ್ದುಪಡಿ ಮಾಡಿದ್ದು, ದಾಖಲೆಗಳ ನೊಂದಣಿಗೆ ಫೋಟೋ ಅಗತ್ಯವಿಲ್ಲ.

ಕುಂದಾಪುರ ತಾಲ್ಲೂಕಿನಲ್ಲಿ ಆಶ್ರಯ ಮನೆಗಳಿಗೆ ಸಹಾಯಧನ

59 (63) - ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ 1994-95 ರಿಂದ ಆಶ್ರಯ ಮನೆಗಳಿಗೆ ಸಹಾಯಧನ ಇನ್ನು ಪಾವತಿಸದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪಾವತಿಗೆ ಬಾಕಿ ಇರುವ ಮೊತ್ತ ಎಷ್ಟು?

ಇ) ಯಾವಾಗ ಪಾವತಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಹೌದು.

ಆ) 1994-95 ರಿಂದ 1998-99 ರವರೆಗೆ ರೂ. 60.15 ಲಕ್ಷಗಳ ಬಾಕಿ ಸಹಾಯಧನ ಬೇಕಿದ್ದು, ಉಡುಪಿ ಜಿಲ್ಲೆ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಯವರಲ್ಲಿ ರೂ. 21.31 ಲಕ್ಷಗಳು ಇದೆ.

ಇ) ಪ್ರಗತಿಯನ್ನಾಧರಿಸಿ ಅವಶ್ಯವಿದ್ದ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕುಂದಾಪುರ ತಾಲ್ಲೂಕ್ ಸರ್ಕಾರಿ ಜನರಲ್ ಆಸ್ಪತ್ರೆಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಉಪಕರಣ ಒದಗಿಸುವ ಕುರಿತು

60 (65) - ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಸರಕಾರಿ ಜನರಲ್ ಆಸ್ಪತ್ರೆಯಲ್ಲಿ ಸಂತಾನಹರಣ ಶಸ್ತ್ರ ಚಿಕಿತ್ಸೆ ಉಪಕರಣ ಕಳೆದ 8 ತಿಂಗಳುಗಳಿಂದ ಹಾಳಾಗಿ ಉಪಯೋಗಕ್ಕೆ ಬಾರದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೊಸ ಉಪಕರಣವನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು

ಆ) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಅಗತ್ಯವಿರುವ ಡಬಲ್ ಪಂಕ್ಚರ್ ಲೆಪ್ರೊಸ್ಕೋಪ್ ಉಪಕರಣಗಳನ್ನು ಭಾರತ ಸರ್ಕಾರವೇ ಸರಬರಾಜು ಮಾಡುತ್ತಿದೆ. ಆದ್ದರಿಂದ, ಕೇಂದ್ರ ಸರ್ಕಾರಕ್ಕೆ

ಹೊಸ ಉಪಕರಣಗಳ ಬೇಡಿಕೆಯನ್ನು ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಹೊಸ ಉಪಕರಣ ಸರಬರಾಜಾದ ಕೂಡಲೇ ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ತುರ್ತಾಗಿ ಒದಗಿಸಲಾಗುವುದು.

ಸಿಂಗಲ್ ಪಂಕ್ಚರ್ ಲೆಪ್ರೋಸ್ಕೋಪನ್ನು ಹೊಸದಾಗಿ ಸರಬರಾಜು ಮಾಡಲು ಕ್ರಮ ತೆಗೆದುಕೊಂಡಿದೆ.

ರಾಜ್ಯದಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ನಡೆಸುತ್ತಿರುವ ಕಾಲೇಜುಗಳಲ್ಲಿ ಕನ್ನಡವನ್ನು ಪಠ್ಯ ವಿಷಯವಾಗಿ ಬೋಧಿಸುವುದು

62 (83) - ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, (ಶಿವಾಜಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ನಡೆಸುತ್ತಿರುವ ವಿವಿಧ ವೃತ್ತಿ ಶಿಕ್ಷಣ ಕೋರ್ಸುಗಳ ವಿವರ ನೀಡುವುದು;

ಆ) ಈ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರತಕ್ಕ ಕಾಲೇಜುಗಳಲ್ಲಿ ಕನ್ನಡವನ್ನು ಪಠ್ಯ ವಿಷಯವಾಗಿ ಬೋಧಿಸಲು ನಿರ್ಧರಿಸಲಾಗಿದೇಯೇ;

ಇ) ಹಾಗಿದ್ದಲ್ಲಿ ಇದರಿಂದ ಆಗತಕ್ಕ ಪ್ರಯೋಜನವೇನು;

ಈ) ಇದಕ್ಕಾಗಿ ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆಯೇ;

ಉ) ಈ ನಿರ್ಧಾರ ಯಾವ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುತ್ತದೆ?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಪದವಿ ಕೋರ್ಸುಗಳು -25

ಸ್ನಾತಕೋತ್ತರ ಕೋರ್ಸುಗಳು -43

(ವಿವರಗಳು ಒಂದನೇ ಅನುಬಂಧದಲ್ಲಿದೆ)

ಆ) ಹೌದು

ಇ) ಕನ್ನಡೇತರರಿಗೆ ಕನ್ನಡವನ್ನು ಆಡು ಭಾಷೆಯಾಗಿ ಕಲಿಯಲು ಅನುಕೂಲವಾಗುತ್ತದೆ. ಕನ್ನಡಿಗರಿಗೆ ಕನ್ನಡದ ಸಂಸ್ಕೃತಿ ಮತ್ತು ಪರಂಪರೆಯ ಅರಿವಾಗುತ್ತದೆ.

ಈ) ಹೌದು

ಉ) 2002-2003

ಅನುಬಂಧ 1

ವಿ.ತಾ.ವಿ.ಯಲ್ಲಿ ಹಾಲಿ ಇರುವ ಪದವಿ ಕೋರ್ಸ್‌ಗಳು

1. ಆರ್ಕಿಟೆಕ್ಚುರಲ್ ಇಂಜಿನಿಯರಿಂಗ್
2. ಆಟೊಮೊಬೈಲ್ ಇಂಜಿನಿಯರಿಂಗ್